**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 71/2021**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 03.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಕಲ್ಲಯ್ಯ ಮಠಪತಿ |
| ತಂದೆಃ ಗಂಡನ ಹೆಸರು | ಮಲ್ಲಯ್ಯ |
| ಉದ್ಯೋಗ | ಎ ಎಸ್ ಐ |
| ವಯಸ್ಸು | 55 |
| ವಾಸಸ್ಥಳ | ಉಡಗೇರಿ |

**ಪ್ರಾರಂಭ ಸಮಯಃ 12.05 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ನಾನು ಜುಲೈ 2019 ರಿಂದ 01.01.2021 ರವರೆಗೆ ಕಲಘಟಗಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ.

ಸಾಕ್ಷಿಗೆ ದಿಃ21.10.2020 ರ ಪಂಚನಾಮೆ ಮತ್ತು ದೂರನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ1 ಮತ್ತು 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ1(ಎ) ಮತ್ತು ನಿಪಿ2(ಎ) ಎಂದು ಗುರುತಿಸಲಾಯಿತು. ಮಾದರಿಯ ಶೀಲು ಮತ್ತು ಸಹಿಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ3 ರಿಂದ 8 ಎಂದು ಗುರುತಿಸಲಾಯಿತು.

ದಿಃ21.10.2020 ರಂದು ಬೆಳಿಗ್ಗೆ 07.30 ಗಂಟೆ ಸಮಯದಲ್ಲಿ ನಾನು ಕಲಘಟಗಿ ಪೊಲೀಸ್ ಠಾಣೆಯಲ್ಲಿದ್ದಾಗ ನನಗೆ ಒಂದು ಬಾತ್ಮಿ ಬಂದಿರುತ್ತದೆ. ಈರಪ್ಪ ತಂದೆ ಲಕ್ಷ್ಮಣ ಎಂಬ ವ್ಯಕ್ತಿಯು ಅನಧೀಕೃತವಾಗಿ  ದೂಳಿಕೊಪ್ಪ ಕ್ರಾಸ ಬಳಿ ಮದ್ಯವನ್ನು ಸಾಗಾಟ ಮಾಡುತ್ತಿದ್ದಾನೆಂದು ಬಾತ್ಮಿ ಬಂದಿತು. ಸದರಿ ಬಾತ್ಮಿಯ ವಿಚಾರವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಅನುಮತಿಯ ಮೇರೆಗೆ ಚಾಸಾ.4 ಮತ್ತು 5 ರವರನ್ನು ಕರೆದುಕೊಂಡು ಸರ್ಕಾರಿ ಜೀಪನಲ್ಲಿ ಘಟನಾ ಸ್ಥಳಕ್ಕೆ ಹೊರಟೆವು. ಪಂಚರಾದಂತಹ ಚಾಸಾ.2 ಮತ್ತು 3 ರವರನ್ನು ಪೊಲೀಸ್ ಠಾಣೆಯ ಬಳಿ ಕರೆಸಿ ಅವರನ್ನು ಸಹ ನಮ್ಮಾಂದಿಗೆ ಕರೆದುಕೊಂಡು ಹೋದೆವು.

ನಾವು ಘಟನಾ ಸ್ಥಳಕ್ಕೆ 07.45 ಕ್ಕೆ ಹೋದೆವು. ನಮ್ಮ ಜೀಪನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾವು ಮರೆಯಲ್ಲಿ ನಿಂತು ವಾಚ ಮಾಡತ್ತಿದ್ದಾಗ ಒಬ್ಬ ಅಸಾಮಿ ಒಂದು ರಟ್ಟಿನ ಬಾಕ್ಸನ್ನು ಇಟ್ಟುಕೊಂಡು ನಿಂತಿದ್ದನು. ಸದರಿ ವ್ಯಕ್ತಿಯ ಮೇಲೆ ನಮಗೆ ಅನುಮಾನ ಬಂದ ಆತನನ್ನು ಸುತ್ತುವರೆದು ದಾಳಿ ಮಾಡಿದೆವು.  ನಂತರ ಅಪಾದಿತನ ಬಳಿ ಇದ್ದಂತಹ ಬಾಕ್ಸನ್ನು ಪರಿಶೀಲಿಸಲಾಗಿ ಸದರಿ ಬಾಕ್ಸನಲ್ಲಿ 180 ಎಮ್ ಎಲ್ ನ 48 ಓಲ್ಡ್ ಟ್ರಾವರಿನ ವಿಸ್ಕಿ ಟೆಟ್ರಾ ಪ್ಯಾಕೇಟಗಳು ಇರುವುದು ಕಂಡು ಬಂದಿತು. ಅಪಾದಿತನ ಹೆಸರನ್ನು ಕೇಳಲಾಗಿ ತನ್ನ ಹೆಸರು ಈರಪ್ಪ ತಂದೆ ಲಕ್ಷ್ಮಣ ಹರಿಜನ ಎಂದು ತಿಳಿಸಿದನು ಮತ್ತು ಸದರಿ ಮಾಲನ್ನು ಹೊಂದಲು ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಎಂದು ಹೇಳಿದನು. ನಂತರ ಸದರಿ ಮಾಲನ್ನು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಸದರಿ ಮಾಲನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬಿಳಿ ಬಟ್ಟೆಯಲ್ಲಿ ಸುತ್ತಿ ಇಲಾಖಾ ಸೀಲನ್ನು ಹಾಕಲಾಯಿತು. ನಿಪಿ1 ನ್ನು ಬೆಳಿಗ್ಗೆ 08.20 ರಿಂದ 09.20 ರವರೆಗೆ ಪಂಚರು ಹೇಳಿದಂತೆ ಬರೆಯಲಾಯಿತು. ನಂತರ ಪಂಚರ ಸಹಿಗಳನ್ನು ಪಡೆದುಕೊಂಡೆನು.

ನಂತರ ನಾವು ಮಾಲೀನೊಂದಿಗೆ ಮತ್ತು ಅಪಾದಿತನೊಂದಿಗೆ ಪೊಲೀಸ್ ಠಾಣೆಗೆ ಬಂದು ಚಾಸಾ.8 ರವರಿಗೆ ನಿಪಿ1 ರಂತೆ ನಾನು ದೂರು ದಾಖಲಿಸಿದೆನು. ನಿಪಿ2 ಮತ್ತು ಮಾಲನ್ನು ಚಾಸಾ.8 ರವರಿಗೆ ನಿವೇದಿಸಿಕೊಂಡೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಸದರಿ ದಿನ ನಾನು ದಾಳಿ ಮಾಡಿ ದಸ್ತಗಿರಿ ಮಾಡಿದಂತಹ ಅಪಾದಿತನು ಈ ದಿನ ನ್ಯಾಯಾಲಯದ ಮುಂದಿರುವ ಅಪಾದಿತನು ಆಗಿರುತ್ತಾನೆ.

**ಪಾಟೀ ಸವಾಲು: ಅಪಾದಿತನ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದ**

ನನ್ನ ಮೊಬೈಲ್ ಸಂಖ್ಯೆಗೆ ಬಾತ್ಮಿ ಬಂದಿತ್ತು. ಆ ಸಮಯದಲ್ಲಿ ನಾನು ಪೊಲೀಸ್ ಠಾಣೆಯಲ್ಲಿದ್ದೆ. ದೂಳಿಕೊಪ್ಪ ಕ್ರಾಸ ಹೀರೆಹೊನ್ನಹಳ್ಳಿ ಗ್ರಾಮದ ಪಕ್ಕದಲ್ಲಿದೆ ಅಂದರೆ ಸರಿ. ಧೂಳಿಕೊಪ್ಪ ಕ್ರಾಸನಲ್ಲಿ ಸಾಕಷ್ಟು ಮನೆಗಳಿವೆ ಅಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಶಾಲೆ ಇದೆ ಅಂದರೆ ಸರಿಯಲ್ಲ. ನಾನು ಗುನ್ನಾ ಸ್ಥಳಕ್ಕೆ ಹೋಗಿದ್ದೆ ಎಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಅಪಾದಿತನಿಗೂ ಮತ್ತು ಮು ಮಾ1 ಕ್ಕೂ ಯಾವೂದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಅಂಕಿ ಸಂಖ್ಯೆಗಾಗಿ ಅಪಾದಿತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಠಾಣೆಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**